**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 5/2021**

| | | | |
|---|---|---|---|
| **ಹೆಸರು** | : | **ರೇವಣಸಿದ್ದಪ್ಪ** | **ದೋ.ಸಾ. 6** |
| **ತಂದೆಯ ಹೆಸರು** | : | **ಮಲ್ಲಣ್ಣ** | **ಪ್ರಾ.ಸಾ. 4** |
| **ವಯಸ್ಸು** | : | **40 ವರ್ಷ** | **ದಿನಾಂಕಃ 29-12-2023** |
| **ಉದ್ಯೋಗ** | : | **ವ್ಯಾಪಾರ** | |
| **ವಾಸಸ್ಥಳ** | : | **ಚಂದಾಪೂರ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ನನಗೆ ಈ ಪ್ರಕರಣದ ಸಾಕ್ಷಿದಾರರಾದ ಚಾಸಾ-1 ಮತ್ತು 7 ನನಗೆ ಗೊತ್ತು. ಸದರಿಯವರು ನನ್ನ ಸಂಬಂಧಿಕರು.

ಈಗ್ಗೆ 2-3 ವರ್ಷಗಳ ಹಿಂದೆ ಒಂದು ದಿನ ಬೆಳಿಗ್ಗೆ ನನ್ನ ಸಂಬಂಧಿಕರಾದ ಚಾಸಾ-1 ಮತ್ತು 7 ರವರು ಚಂದಾಪೂರದಲ್ಲಿರುವ ನನ್ನ ಮನೆಗೆ ಬಂದು ನಮಗೆ ಯಾರೋ ಹೊಡೆದರು ಎಂದು ಹೇಳಿದರು ಮತ್ತು ನನ್ನನ್ನು ಚಿಂಚೋಳಿ ಪೊಲೀಸ್ ಠಾಣೆಗೆ ಕರೆದುಕೊಂಡು ಹೋದರು. ತಮಗೆ ಯಾರು ಹೊಡೆದರು ಎಂದು ಚಾಸಾ-1 ಮತ್ತು 7 ರವರು ನನಗೆ ಹೇಳಲಿಲ್ಲ. ನಾನು ಪೊಲೀಸ್ ಠಾಣೆಯ ಹೊರಗೆ ನಿಂತಿದ್ದೆ ಮತ್ತು ಚಾಸಾ-1 ಹಾಗೂ 7 ರವರು ಠಾಣೆಯ ಒಳಗೆ ಹೋದರು. ಅವರು ಒಳಗೆ ಹೋದ ನಂತರ ನಾನು ಮನೆಗೆ ಬಂದೆ.

ಮೇಲ್ಕಂಡ ವಿಚಾರಗಳನ್ನು ಹೊರತುಪಡಿಸಿ ನನಗೆ ಈ ಪ್ರಕರಣದ ಸಂಬಂಧ ಬೇರೇನೂ ಗೊತ್ತಿಲ್ಲ.

ಪೋಲೀಸರು ಈ ಪ್ರಕರಣದ ಸಂಬಂಧ ನನ್ನನ್ನು ವಿಚಾರಣೆ ಮಾಡಿಲ್ಲ. ಪೋಲೀಸರ ಮುಂದೆ ನಾನು ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಕೊಟ್ಟಿರುವ ಹೇಳಿಕೆಗೆ ಈ ಸಾಕ್ಷಿ ಸಂಪೂರ್ಣ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಸಂಪೂರ್ಣ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ

ನೀಡಲಾಯಿತು.)

<u>**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**</u>

ದಿನಾಂಕ 27-08-2019 ರಂದು ಇಟಗಾ ಗ್ರಾಮಕ್ಕೆ ಹೋಗಿದ್ದ ಚಾಸಾ-1 ಮತ್ತು 7 ರವರು ಅವರ ಊರುಗಳಿಗೆ ಹೋಗಲು ರಾತ್ರಿಯಾದ ಕಾರಣ ವಿಸ್ರಾಂತಿ ಪಡೆಯಲು ರಾತ್ರಿ 10-30 ಗಂಟೆಗೆ ಅವರ ಸಂಬಂಧಿ ಮಲ್ಲಮ್ಮನ ಮನೆ ಕಡೆ ಹೋಗುತ್ತಿದ್ದರು ಎಂದರೆ ಸರಿ. ಆಗ ದಾರಿ ಮದ್ಯೆ ಚಾಸಾ-1 ಮತ್ತು 7 ರವರನ್ನು ಆರೋಪಿ ತಡೆದು ನಿಲ್ಲಿಸಿ ಅವಾಚ್ಯ ಶಬ್ದಗಳಿಂದ ಬೈದನು ಎಂದರೆ ಸರಿಯಲ್ಲ. ನಂತರ ಆರೋಪಿ ಚಾಸಾ-1 ಮತ್ತು 7 ರವರಿಗೆ ಚಾಕು ಮತ್ತು ಬಡಿಗೆ ತೋರಿಸಿ ಅವರ ಬಳಿ ಇದ್ದ ರೂ.8000/- ಹಣ ಕಸಿದುಕೊಂಡನು ಎಂದರೆ ಸರಿಯಲ್ಲ. ಹಣ ಕೊಡಲು ನಿರಾಕರಿಸಿದಾಗ ಆರೋಪಿ ಚಾಕು ಮತ್ತು ಬಡಿಗೆ ತೋರಿಸಿ ಚಾಸಾ-1 ಮತ್ತು 7 ರವರಿಗೆ ಪ್ರಾಣ ಬೆದರಿಕೆ ಹಾಕಿದ ಎನ್ನುವುದು ಸರಿಯಲ್ಲ.

ಮೇಲ್ಕಂಡ ಎಲ್ಲಾ ವಿಚಾರಗಳನ್ನು ಚಾಸಾ-1 ಮತ್ತು 7 ರವರು ನನ್ನ ಮನೆಗೆ ಬಂದು ಹೇಳಿದ್ದರಿಂದ ನನಗೆ ಗೊತ್ತಾಯಿತು ಎಂದು ದಿನಾಂಕ 31-08-2019 ರಂದು ಪೊಲೀಸರಿಗೆ ನಾನು ಕೊಟ್ಟ ಹೇಳಿಕೆಯಲ್ಲಿ ಹೇಳಿದ್ದೇನೆ ಎನ್ನುವುದು ಸರಿಯಲ್ಲ.

ಸಾಕ್ಷಿ ಕೊಟ್ಟಿದ್ದಾರೆ ಎನ್ನಲಾದ ಹೇಳಿಕೆಯನ್ನು ಈಗ ನಿಪಿ-3 ಎಂದು ಗುರುತಿಸಲಾಯಿತು.

ನಿಪಿ-3 ರಂತೆ ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದರೂ ಸಹ ಈಗ ಆರೋಪಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

<u>**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಮ್.ಎಸ್.ಎಸ್. ವಕೀಲರಿಂದಃಇಲ್ಲಾ.**</u>

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**